ಕರ್ನಾಟಕ ವಿಧಾನ ಸಭೆ

ಶನಿವಾರ 13ನೇ ನವೆಂಬರ್ 1999ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ.)
ರವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ:

1) ರೈತರ ಸಮಸ್ಯೆ ಕುರಿತು:

ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಮತ್ತು ನನ್ನ ಸ್ನೇಹಿತರು ಒಂದು ನಿಳುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅದೇನೆಂದರೆ ಈ ರಾಜ್ಯದ ರೈತರಿಗೆ ಮುಂದೆ ಬರುವಂತಹ ದಿವಸಗಳಲ್ಲಿ ಬಹಳ ಕಷ್ಟವಾಗುವ ಬಗ್ಗೆ ತಿಳಿಸಿದ್ದೇವೆ.

ಅಧ್ಯಕ್ಷರು: ಮಾನ್ಯ ಭೈರೇಗೌಡರೇ, ತಾವು ಕೊಟ್ಟಿರುವಂಥ ನೋಟೀಸ್ ಬಂದಿದೆ. ಈಗ ಮಾನ್ಯ ಮುಖ್ಯಮಂತ್ರಿಯವರು ರಿಪ್ಲೈ ಕೊಟ್ಟ ಮೇಲೆ ನೀವು ಕ್ಲಾರಿಫಿಕೇಷನ್ ಕೇಳುವಂತಹ ಸಂದರ್ಭದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಇವತ್ತು ತಮ್ಮೆಲ್ಲರ ಒಪ್ಪಿಗೆಯ ಪ್ರಕಾರ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸರ್ಕಾರದಿಂದ ಉತ್ತರವೆಂದು ಇಟ್ಟುಕೊಂಡಿದ್ದೇವೆ. ಆದುದರಿಂದ ತಾವು ಮಾನ್ಯ ಮುಖ್ಯಮಂತ್ರಿಯವರ ರಿಪ್ಲೈ ಮುಗಿದ ಮೇಲೆ ಕೇಳಿ, ನಾವು ಸರ್ಕಾರಕ್ಕೆ ಉತ್ತರವನ್ನು ಹೇಳುವಂತಹ ಸಂದರ್ಭದಲ್ಲಿ ಈ ವಿಷಯಕ್ಕೂ ಉತ್ತರ ಹೇಳಬೇಕೆಂದು ಹೇಳಿದ್ದೇವೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೆ, ನಮಗೆ ಸರ್ಕಾರದಿಂದ ಉತ್ತರ ಬೇಕಾಗಿದೆ, ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆನ್ನುವ ಬಗ್ಗೆ ಪ್ರಾಧಾನ್ಯತೆ ಇದೆಯೇ ವಿನಹ ನಾವು ಇದನ್ನು ಪ್ರಸ್ತಾಪ ಮಾಡಬೇಕೆಂದು ಮಾಡುವುದಿಲ್ಲ, ತಾವು ಹೇಳಿದಂತೆ ಆಗಬಹುದು.

ಅಧ್ಯಕ್ಷರು: ಮಾನ್ಯ ಡಿ.ಬಿ. ಚಂದ್ರೇಗೌಡರೇ, ತಾವು ಕಮಿಟಿಗಳ ಬಗ್ಗೆ ಇನ್ನು ಏನು ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ನಾವು ವಿವಿಧ ಸಮಿತಿಗಳ ರಚನೆಯ ಬಗ್ಗೆ ಎಲ್ಲಾ ಪಕ್ಷಗಳ ಮುಖಂಡರೊಡನೆ ಚರ್ಚೆ ಮಾಡಿದ್ದೇವೆ. I would appeal to the Members to authorise the Speaker to take a decision.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆಗಬಹುದು.

ಶ್ರೀ ಸಿ.ಭೈರೇಗೌಡ: ತಾವು ಇತರ ಬಗ್ಗೆ ಮೋಶನ್ ಮೂವ್ ಮಾಡಬೇಕಾಗುತ್ತದೆ.